Reg.No. M. 1550.
KODAGU" MERCARA, (Coorg).

ಕೊಡಗು

ಸಂಪಾದಕರು:–ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಜಂದಾ: ರೂ: ೩–೮–೦.

ಸಂಪುಟ ೨೫ | ತಾರೀಕು ೨೯—೯—೧೯೪೪ನೇ ಶುಕ್ರವಾರ. | ಸಂಚಿಕೆ ೧೭

ಹಿಂದೂ ಮುಸ್ಲಿಂ ಐಕ್ಯ.

[ಗಾಂಧಿ–ಜಿನ್ನಾ ಮಾತುಕತೆ ಮುರಿದು ಬಿದ್ದ ವಾರ್ತೆ ಈ ಲೇಖನದ ಸಂಬಂಧ ಬಂದಿದೆ]

ಗಾಂಧಿ–ಜಿನ್ನಾ ಪಂಥಾನದಲ್ಲಿ ಇದು ಎರಡನೇ ವಾರ. ಈ ಮಾತುಕತೆ ಎಷ್ಟು ದಿನವೋ ಗೊತ್ತಿಲ್ಲ. 'ಮುಂದೆ ತಿಳಿಸುವವರೆಗೆ ನಡೆಯುತ್ತಲೇ ಇರುತ್ತದೆ' ಎಂದು ಜಿನ್ನಾ ಹೇಳಿದ್ದಾರೆ.

ಗಾಳಿ ಎತ್ತ ಬೀಸುತ್ತಿದೆಯೆಂಬುದನ್ನು ಈಗಲೇ ಹೇಳಬಹುದಾಗಿದೆ. ಅವರಿಬ್ಬರೂ ಒಂದು ಒಪ್ಪಂದಕ್ಕೆ ಬರುವುದೆಂಬುದರಲ್ಲಿ ಸಂದೇಹವಿಲ್ಲ. ಮೂರು ಗಾರೆ ತಪ್ಪಿದರೆ ಮೊದಲೇ ತಪ್ಪಿ ಹೋಗಬೇಕಾಗಿತ್ತು. ಹಾಗಾಗಲಿಲ್ಲ. ಸೌಧಾರ್ದ್ರ ವಾತಾವರಣದಲ್ಲಿ ಸುರಸವಾಗಿ ನಡೆಯುತ್ತಿದೆ ಚರ್ಚೆ. ಇದನ್ನೆಲ್ಲ ನೋಡಿದರೆ ಮೂಲಭೂತವಾದ ಸಂಶಯ ಕುರಿತು ಗಾಂಧೀಜಿಗೂ ಜಿನ್ನಾರವರಿಗೂ ಒಪ್ಪಂದ ಆಗಿರಲಿಕ್ಕೆ ಜೇಕು. ಈಗ ಅವರು ವಿವರಗಳನ್ನು ಜರ್ಚಿಸುತ್ತಿದ್ದಾರೆ. ಇಲ್ಲವಾದರೆ ಚರ್ಚೆ ಇಷ್ಟು ದೂರ ಎಳೆಯಲು ಕಾರಣವೇ ಇರಲಿಲ್ಲ.

ಅಂತೂ ಈ ವಾರಾಂತ್ಯದೊಳಗಾಗಿ ನಿರ್ಧಾರವಾದ ಫಲಿತಾಂಶ ಹೊರಬೀಳಬಹುದೇ.

ದೇಶದ ಪ್ರಮುಖ ಕೋಮುಗಳೆರಡನ್ನೂ ಸೇರಿಸಲು ಪಾಕಿಸ್ಥಾನದ ಸೇತುವೆ ಹಾಕಿಪಂಥಾಯಿತು. ಹೊಸ ಮುಸ್ಲಿಂ ದೇಶದ ಗಡಿಗಳಾವುವು; ಜನರ ಮತನನ್ನು ಜೇಗೆ ಪಡೆಯಬೇಕು; ಈ ಪ್ರಕರಣದಲ್ಲಿ ಬ್ರಿಟನು ವಹಿಸಬೇಕಾದ ಪಾತ್ರವೇನು–ಇವೆಲ್ಲ ವಿಚಾರಗಳೂ ವಿಮರ್ಶೆಯಲ್ಲಿರಬಹುದು.

ಗಾಂಧೀಜಿ ಒಂದು ಮುಖ್ಯ ಬೇಡಿಕೆಯನ್ನು ಮುಂದಿಟ್ಟಿದ್ದಾರೆಂದು ಹೇಳಲಾಗಿದೆ. ಸ್ವಾತಂತ್ರ್ಯದ ವಿಚಾರದಲ್ಲಿ ಏನೇ ಆಗಲಿ ಕಾಂಗ್ರೆಸೂ ಲೀಗೂ ಒಂದಾಗಿ ನಿಲ್ಲಬೇಕು; ಆಷ್ಟೇ ಅಲ್ಲ ಸ್ವಾತಂತ್ರ್ಯವನ್ನು ಗಳಿಸಲು ಮುಂದೆ ಕಾಂಗ್ರೆಸು ಏನಾದರೂ ಕಾರ್ಯಕ್ರಮ ಕೈಗೊಂಡರೆ ಲೀಗು 'ಫಿಟ್–ಸಟ್' ಅನ್ನದೆ ಒಪ್ಪಬೇಕು–ಎಂಬುದೇ ಅದು.

ತೀರ ಮುಂದೆ ಹೋಗಲು ಜಿನ್ನಾ ಹಿಂದು ಮುಂದು ನೋಡುತ್ತಿರಬಹುದು; ಇದು ಸ್ವಾಭಾವಿಕವೆ.

ಶಿಲ್ಪಿಗಳಿಬ್ಬರೂ ಕೂತು ಭಾರತದ ಭವಿಷ್ಯವನ್ನಿಂದು ರೂಪುಗೊಳಿಸುತ್ತಿದ್ದಾರಷ್ಟೆ. ಸಂಧಾನ ಮಂಗಿದ ಕೂಡಲೇ ಜಿನ್ನಾ ಲೀಗ್ ಮುಂದೆ ಈ ಆಲೋಚನೆಯನ್ನು ಅಂಗೀಕರಿಸಲಿಕ್ಕಾಗಿ ಇಡುವರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರನ್ನು ಕಂಡು ಅವರ ಒಪ್ಪಿಗೆ ಪಡೆಯಲಿಕ್ಕೆ ಅವಕಾಶ ಕೊಡಬೇಕೆಂದು ಮಹಾತ್ಮರು ಬ್ರಿಟಿಷ್ ಸರಕಾರವನ್ನು ಕೇಳುವರು. ಅದಕ್ಕೆ ಏನುತ್ತರ ಬಂದೀತೋ ನಿರ್ಧರವಾಗಿ ಹೇಳಲು ಸಾಧ್ಯವಿಲ್ಲ. ಬಹುಶಃ ಗಾಂಧೀಜಿಗೆ ಆ ಅವಕಾಶ ದೊರೆತರೂ ಜೊರೆಯಬಹುದು.

ಅನಂತರ ಕ್ರಿಪ್ಸ್ ಸಲಹೆಗಳನ್ನು ಅಂಗೀಕರಿಸಲು ತಾವು ಸಿದ್ಧರಾಗಿರುವುದಾಗಿ ಮಹಾತ್ಮರೂ ಜಿನ್ನಾರವರೂ ತಿಳಿಸುವವರಂತೆ. ಕ್ರಿಪ್ಸ್ ಸಲಹೆಗಳು ಆಚರಣೆಗೆ ಬರಬೇಕಾಗಿದ್ದರೆ ಕೋಮುವಾರು ಒಪ್ಪಂದ ಮೊದಲು ಆಗಬೇಕೆಂದು ಪರತ್ತು ಹಾಕಲಾಗಿತ್ತು. ಕೋಮುವಾರು ಒಪ್ಪಂದ ನಿರ್ಧರವಾದ ಮೇಲೆ ರಾಷ್ಟ್ರೀಯ ಸರಕಾರ ಸ್ಥಾಪನೆಗೆ ಅಡ್ಡಿಯಿರಲು ಅವಕಾಶವೇ ಇಲ್ಲ.

ಫಲ ಏನೋ ಇರಲಿ, ಲೀಗಿಗೆ ಎಷ್ಟೇ ರಿಯಾಯಿತಿಗಳನ್ನು ಕೊಟ್ಟಂತಾಗಲಿ ಈ ಒಪ್ಪಂದವನ್ನು ಕಾಂಗ್ರೆಸ್ ಮಹಾಸಭೆ ಅಂಗೀಕರಿಸಬಹುದೆಂಬ ನಂಬಿಕೆ ಮಹಾತ್ಮರಿಗಿದೆ. ವಿಧಾಗವೋ ಇಲ್ಲವೋ ಈ ಸಮಯದಲ್ಲಿ ಒಪ್ಪಂದಕ್ಕೆ ಬರುವುದು ಅತಿ ಮುಖ್ಯವೆಂಬ ಅಭಿಪ್ರಾಯ ಭಾವಿಸುತ್ತಾರೆ. ತಮ್ಮ ಯೋಜನೆಯನ್ನು ಮುಂದಿಟ್ಟು ಜನರ ಬೆಂಬಲ ಪಡೆಯಲು ಮಹಾತ್ಮರೇನಾದರೂ ದೇಶಪರ್ಯಟನ ಮಾಡಲಾರಂಭಿಸಿದರೆ ಆವರು ಗೆಲ್ಲುವುದು ಖಂಡಿತ.

ಪತ್ರಿಕೆಗಳಲ್ಲಿ ಬರುವ ಊಹಾಪೋಹಗಳನ್ನು ನಂಬಬಾರದೆಂದು ಮಹಾತ್ಮರು ಎಚ್ಚರಿಸಿದರು. "ನಮ್ಮ ಮಾತುಕತೆಗಳ ಭವಿಷ್ಯವನ್ನು ತಿಳಿಸಬಲ್ಲವನು ಒಬ್ಬನೇ ಇಬ್ಬ–ದೇವರು! ನಾವು ಕಾಲಹರಣಕ್ಕಾಗಿ ಸಭೆ ಸೇರುತ್ತಿಲ್ಲ ನಮ್ಮ ಕಾರ್ಯದಲ್ಲಿ ನೀವು ಆಶೆಯೊಂದನ್ನೇ ಕೊಡಬೇಕು; ಮತ್ತೇನನ್ನೂ ನೋಡಬಾರದು ಹಾಗೆ ಆಶೆ ಇಲ್ಲದ ಸೂಚನೆಯೇನಾದರೂ ಬಂದರೆ ನಿಮಗೆ ತಿಳಿಸುತ್ತೇನೆ. ಕೊಂಚ ಆಶೆ ಕಾಣುತ್ತಿರುವುದರಿಂದಲೇ ನಾವು ಎಡಬಿಡದೆ ದಿನವಹಿ ಮಾತುಕತೆ ನಡೆಸುತ್ತಿರುವುದು.

'ವಿ. ಕ.'

ಮೂರನೇ ಯುದ್ಧ

ಕೆಲವೇ ಗಂಟೆಗಳಲ್ಲಿ ಮುಗಿದು ಹೋಗಬಹುದು!

ಹರ್ ಹಿಟ್ಲರನು ಬ್ರಿಟನ್ ಮೇಲಿ ಹಾರಾಡುವ ಬಾಂಬುಗಳನ್ನು ಸುರಿಸುತ್ತಿದ್ದಾನಷ್ಟೆ. ಯೂರೋಪಿನ ಮೂರನೇ ಮಹಾಯುದ್ಧದಲ್ಲಿ ಈ ಜಗತ್ತು ಎಂತಹ ಘೋರ ಪರಿಸ್ಥಿತಿಯನ್ನು ಕಾಣಬೇಕಾಗಿದೆಯೆಂಬುದಕ್ಕೆ ಈ ಹಾರಾಡುವ ಬಾಂಬುಗಳು ಸಂಕೇತವಾಗಿವೆ.

ಹರ್ ಹಿಟ್ಲರನ ಹಾರಾಡುವ ಬಾಂಬುಗಳು ಯುದ್ಧಪರಿಸ್ಥಿತಿಯನ್ನು ಬದಲಾಯಿಸಲು ಸಕಾಲದಲ್ಲಿ ಕಾರ್ಯಕ್ಷೇತ್ರಕ್ಕೆ ಬರಲಿಲ್ಲವೆನ್ನುತ್ತಾರೆ ನಿವುಣರು. ಆದರೂ ಇನ್ನು 10 ವರ್ಷಗಳೊಳಗಾಗಿ ಇದಕ್ಕಿಂತ ದೊಡ್ಡದಾದ ಮತ್ತು ದೂರ ಹೋಗುವ ಬಾಂಬುಗಳನ್ನು ತಯಾರಿಸಲಾಗುವುದೆಂದೂ ಇಪ್ಪ ಮುಂದಿನ ಕದನಗಳೆಲ್ಲ ವರ್ಷಗಟ್ಟಲೆ ನಡೆಯದೆ ಹಲವು ಗಂಟೆಗಳಲ್ಲೇ ಮುಗಿದುಹೋಗಬಹುದೆಂದು ಹೇಳಲಾಗಿದೆ. ಆ ಬಾಂಬುಗಳನ್ನು ರೇಡಿಯೋ ಮೂಲಕ ಹತೋಟಿಯಲ್ಲಿ ಇಡಬಹುದಂತೆ.

ಚೀಣಾವನ್ನು ಮೂಲವಾಗಿ ಮೂಡಿಕೊಂಡು 20 ನಿಮಿಷಗಳೊಳಗಾಗಿ ಈ ಹಾರಾಡುವ ಬಾಂಬುಗಳಿಂದ ಜಪಾನನ್ನು ನೆಲಸಮ ಮಾಡಬಹುದೆಂದು ನಿಪುಣರು ಹೇಳುತ್ತಾರೆ.

ಜರ್ಮನಿಯು ಈಗ ತಯಾರಿಸಿರುವ ಬಜ್–ಬಾಂಬು 150 ಮೈಲಿ ದೂರ ಹೋಗಬಲ್ಲದು. ಅದರ ವೇಗ ಗಂಟೆಗೆ 200 ರಿಂದ 300 ಮೈಲಿ.

—೦೦—

ಕೊ ಡ ಗು

ತಾ. ೨೯-೯-೧೯೪೪ನೇ ಶುಕ್ರವಾರ

ಗಾಂಧಿ ಜಯಂತಿ.

ಭಿಂದೂದೇಶದ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಲ್ಪಡತಕ್ಕಂಥಾ 1869 ನೇ ವರ್ಷದ ಅಕ್ಟೋಬರು ತಾ. ಎರಡನೇ ದಿನ ಕಳೆದು 75 ವರ್ಷಗಳು ಸಂದುಹೋದವು. ಅಂದೇ ನರಕುಲ ಚೂಡಾಮಣಿ ಮಹಾತ್ಮ ಗಾಂಧಿಯವರು ಹುಟ್ಟಿದ್ದು. ಅಂದೇ ಭಾರತ ಮಾತೆಯ ಭವ್ಯಭವಿತವ್ಯದ ಪೂರ್ವೋದಯವಾದುದು. ಅಂದೇ ಭಾರತ ದಿಗಂತದಲ್ಲಿ ಭಾಗ್ಯರವಿಯಾಗಿ ಮೆರೆಯತ್ತಿರುವ ಮಹಾತ್ಮಕ್ತಿ ಗಾಂಧಿಯವರ ಜನನವಾದುದು. ಈ ಮುಕ್ಕಾಲು ಶತಮಾನದ ಅವಧಿಯಲ್ಲಿ ಹಿಂದೂದೇಶದ ಚರಿತ್ರೆಯಲ್ಲಾದ, ಮಹಾಘಟನೆಗಳಲ್ಲಿ ಮಹಾತ್ಮರ ಕೈವಾಡವಿಲ್ಲದ್ದು ಯಾವುದೂ ಇಲ್ಲವೆಂದರೂ ಅತ್ಯುಕ್ತಿಯಾಗದು. ಭರತಖಂಡದ ಈ ಎಪ್ಪತ್ತೈದು ವರ್ಷಗಳ ಜೀವನ ಪ್ರವಾಹದಲ್ಲಿ ಸಮರಸವಾಗಿ ಬೆರೆತು, ಆ ಪ್ರವಾಹಕ್ಕೆ ಒಂದು ಚೇತನ ಶಕ್ತಿಯಾಗಿ, ಒಂದು ಮಾರ್ಗದರ್ಶಿಯಾಗಿ ಗಾಂಧೀಜಿಯವರು ಕೆಲಸ ಮಾಡಿದ್ದಾರೆ. ಪಾಶ್ಚಿಮಾತ್ಯ ಸಂಸ್ಕೃತಿಯ ಸಂಪರ್ಕದಿಂದ ಭಾರತೀಯರ ಧರ್ಮ ಸರಸ್ಸು ಕಲುಷಿತವಾಗಿ, ಭಾರತ ಸಂಸ್ಕೃತಿಯು ಮಡಿಯಾಗುತ್ತಿದ್ದ ಕಾಲಕ್ಕೆ ಜನ್ಮವೆತ್ತಿ ಭೌತಿಕವಾದ ಪರಕೀಯರ ಸಂಸ್ಕೃತಿಯ ಟೊಳ್ಳುತನವನ್ನು ಸಾರಿ ಮಹಾ ತಪೋನಿಧಿ ಗೌತಮಬುದ್ಧನಂತೆ, ಮಹಾತೇಜಸ್ವಿಯಾದ ವಿವೇಕಾನಂದನಂತೆ ಭಾರತದ ಆರ್ಶೀಯ ಸಂಸ್ಕೃತಿಯ ವಿಜಯ ಡಿಂಡಿಮವನ್ನು ಜಗತ್ತಿನಲ್ಲಿ ಬಾರಿಸಿದ ಮಹಾಪುಣ್ಯ ವ್ಯಕ್ತಿ ಮಹಾತ್ಮರ ಜನ್ಮೋತ್ಸವವು ಸರ್ವರಿಗೂ ಪುಣ್ಯವುಹೂರ್ತವಾಗಿದೆ. ಈ ಭಾರತ ಭಾಗ್ಯವಿಧಾತನ ಪುಣ್ಯಜೀವನ ಸ್ಮರಣೆಯೇ ಅಖಂಡವಾದ ಪ್ರಾರ್ಥನೆ; ಅತ್ಯುತ್ತಮವಾದ ದೇವತಾರಾಧನೆ. ಆದ್ದರಿಂದಲೇ ಡಾ. ಪಟ್ಟಾಭಿಯವರು 'ಮಹಾತ್ಮರು ಉಪನಿಷತ್ತಿನ ಪುರಾಣಪುರುಷ'ರೆಂದದ್ದು.

ಗುಲಾಮ ಭಾರತವನ್ನು ಸ್ವಾತಂತ್ರ್ಯದ ಸನ್ನಿಧಿಗೆ ಒಯ್ಯುವ ಕಾರ್ಯದಲ್ಲಿ ತನ್ನ ಜೀವನವನ್ನು ತೇದು ಸವೆಯಿಸಿದ ಈ ಮಹಾತ್ಮನ ಜೀವನ ಸಮಯದಲ್ಲಿ ನಾವು ಬದುಕುತ್ತಿರುವದು ನಮ್ಮ ಪೂರ್ವಪುಣ್ಯ. ಇಂದಿನ ಯುಗದೇವರಾದ ಮಹಾತ್ಮರ ಪ್ರತಿಯೊಂದು ನುಡಿಯು ಮಾನವ ಕೋಟಿಯ ಅಂತರ್ಯದಲ್ಲಿ ಬೆಳಗಿ, ಅವರ ರಕ್ತದಲ್ಲಿ ರಕ್ತವಾಗಿ, ಮಾಂಸದಲ್ಲಿ ಮಾಂಸವಾಗಿ, ಜೀವನದ ಶ್ರೇಯೋಗಮನಕ್ಕೊಂದು ಶಾಶ್ವತ ಪ್ರೇರಕಶಕ್ತಿಯೂಗಿ, ಕಷ್ಟಕಾಲದಲ್ಲೊಂದು ವಜ್ರಕವಚವಾಗಿ, ನಿರಾಶೆಯ ತಿಮಿರದಲ್ಲೊಂದು ಆಶಾಕಿರಣವಾಗಿ, ಅಧೈರ್ಯದ ಕಾಲದಲ್ಲೊಂದು ಪಾಂಚಜನ್ಯವಾಗಿ ಜನಜೀವನವನ್ನು ಬೆಳಗಿಸುತ್ತಿದೆ. ಈ ಮಹಾ ತತ್ವಗಳನ್ನು ಗಾಂಧೀಜಿಯವರು ಕಾರ್ಯರೂಪದಲ್ಲಿ ಭಾರತೀಯರ ಮುಂದಿಟ್ಟಿರುವರು. ಮಹಾತ್ಮರು ಅದ್ವಿತೀಯರಾದ ಕರ್ಮಯೋಗಿಗಳು. ಕರ್ಮಮಾಡದೆ, ಶರೀರವನ್ನು ಸವೆಯಿಸದೆ ಯಾವ ಪರಮೋತ್ಕೃಷ್ಟ ಸಾಧನೆಯೂ ಸಾಧ್ಯವಿಲ್ಲವೆನ್ನುತ್ತಾರೆ. ಇಂದು ಭರತಖಂಡದಲ್ಲಿರುವ 400 ಮಿಲಿಯ ಭಾರತೀಯರೇ ದೇವರ ಪ್ರತೀಕಗಳು. ಮಾನವ ಸಮೂಹದ ಸೇವೆಮಾಡುವದೇ ಅತ್ಯುಚ್ಚ ಭಗವತ್ ಆರಾಧನೆ. 'ಚರಖಾ ತಕಲಿಗಳೇ ನಿಮ್ಮ ಪೂಜಾಸಾಧನಗಳಾಗಲಿ, ಅದರ ಮಂಜುಳಗಾನವೇ ನಿಮ್ಮ ಮಂತ್ರವಾಗಲೀ' ಎಂದು ಮಹಾತ್ಮರು ಸಾರಿದ್ದಾರೆ. ಸಮನ್ವಯ ದೃಷ್ಟಿಯಿಂದ ಸರ್ವರನ್ನು ನೋಡುವ, ಪರರ ಕಷ್ಟಕಾಲದಲ್ಲಿ ಭಾಗಿಗಳಾಗುವ, ಉದಾತ್ತ ತತ್ವವನ್ನು ಬೋಧಿಸಿರುವ ಈ ಯುಗಾಚಾರ್ಯನ ಧೀರವಾಣಿಯು ವಿನಾಶ ಪಥದಲ್ಲಿ ಕ್ರಮಿಸುತ್ತಿರುವ ಜಗತ್ತಿಗೆ ಸಂಜೀವಿನಿಯಂತಿದೆ.

ಕೇವಲ ಒಂದು ಉತ್ಸವದ ದೃಷ್ಟಿಯಿಂದ ಇಂಥಾ ಸಾವಿರ ಜಯಂತಿಗಳನ್ನಾಚರಿಸಿದರೂ ಅದರಿಂದ ಪುರುಷಾರ್ಥವೇನೂ ಸಾಧಿಸದು. ಯಾರ ಪವಿತ್ರನಾಮವನ್ನು ಕೇಳಿ ಮಾನವಗಣವು ಹಿಗ್ಗುವದೋ, ಯಾರ ಚರಣಧೂಳಿನಿಂದ ಸರ್ವವೂ ಪವಿತ್ರವಾಗುವದೆಂದು ಜನತೆಯು ನಂಬಿರುವದೋ ಅಂಥಾ ಯುಗದೇವನ ಜಯಂತಿಯೇ ಸಾಲದು. ಆ ಜಯಂತಿಯು ಸಾರ್ಥಕವಾಗಬೇಕಾದರೆ ಈ ದಿನವು ನಮ್ಮ ಪ್ರತಿಜ್ಞಾದಿನವೂ ಆಗಬೇಕು. ಯಾವ ತತ್ವಗಳಿಗಾಗಿ, ಯಾವ ಧ್ಯೇಯಸಾಧನೆಗಳಿಗಾಗಿ ಈ ಮಹಾವಿಭೂತಿಪುರುಷನು ಜೀವಿಸಿರುವನೋ ಆ ತತ್ವಗಳನ್ನು, ಆ ಧ್ಯೇಯವನ್ನು ನಮ್ಮ ಶಕ್ತಿಗೆ ತಕ್ಕಂತೆ ಸಾಧಿಸಲು ನಾವು ಪ್ರಯತ್ನಿಸಬೇಕು. ಇದೇ ಜಯಂತಿಯ ಮೂಲೋದ್ದೇಶವಾಗಿದೆ. ಈ ಉದ್ದೇಶವನ್ನು ಕೊಡಗುನಾಡಿನ ಮಹನೀಯರೂ ಸಾಧಿಸಿ ಜಗಜ್ಜೀವನದ ಸಾರವಾದ ಸುಧಾಮಯವಾದ, ಶಾಂತಿ ಪ್ರೇರಕವಾದ ಗಾಂಧೀತತ್ವಗಳ ಪ್ರಗತಿಗೆ, ಪ್ರಚಾರಕ್ಕೆ ಸಹಾಯಕರಾಗಬೇಕು. ನಾಡಿನ ಹಿತಸಾಧನೆಯಾಗಬೇಕಾದರೆ, ಜನತೆಯ ಕಲ್ಯಾಣವಾಗಬೇಕಾದರೆ, ಮಾನವಗಣದ ಉದ್ಧಾರವಾಗಬೇಕಾದರೆ ಗಾಂಧಿ ಮಾರ್ಗವನ್ನು ಬಿಟ್ಟು ಅನ್ಯಮಾರ್ಗವಿಲ್ಲ. ಗಾಂಧೀಜಿಯವರು ಚಿರಾಯುಗಳಾಗಲಿ.

ಒಳದೇಶ.

ಮದ್ರಾಸಿನ ಡೆಂಟಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಶ್ರೀ ನೆಲ್ಲಿಮಕ್ಕಡ ಬಿ. ಉತ್ತಪ್ಪನವರು ಎಲ್. ಡಿ. ಎಸ್ಸಿ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವರು.

ಕರ್ನಾಟಕ ಸಂಘದ ಕೊಡಗಿನ ಶಾಖೆಯ ಮಹಾ ಸಭೆಯು ತಾರೀಕು 1-10-44ನೇ ಆದಿತ್ಯವಾರ ಸಾಯಂಕಾಲ 4 ಗಂಟೆಗೆ ಮಡಿಕೇರಿ ಓಂಕಾರೇಶ್ವರ ದೇವಸ್ಥಾನ ಹಾಲ್‌ನಲ್ಲಿ ನಡೆಯುವುದು.

ಕೇಂದ್ರ ಎಕ್ಸೈಸ್ ಇಲಾಖೆಯ ಸಬ್ ಇನ್ಸ್‌ಪೆಕ್ಟರುಗಳಾಗಿ ಶ್ರೀ ಗಳಾದ ಡಿ. ಎಸ್. ದೇವಶೆಟ್ಟಿ, ಪಾಲೇಕಂಡ ಉತ್ತಪ್ಪ, ಮೂಚಿಮಂಡ ಐಯ್ಯಪ್ಪ, ಮೂಡೆರ ತಮ್ಮಯ್ಯ ಕೋದಾಂಡ ಮೊಣ್ಣಪ್ಪ, ಪಿ. ಎಸ್. ಪುಟ್ಟುಸ್ವಾಮಿ ಮತ್ತು ಸಿ. ಕೆ. ಕಾಳಯ್ಯ ಇವರುಗಳನ್ನು ನೇಮಿಸಲ್ಪಾಗಿದೆ.

ಮಡಿಕೇರಿ ವಾಂಡರರ್ಸ್ ಹಾಕಿ ಟೀಮಿನವರು ದಸರಾದ ಸಂದರ್ಭ ವೈಸೂರಿನ ಹಾಕಿ ಪಂದ್ಯಾಟದ ಕಡೇ ಆಟದಲ್ಲಿ ಅಪಜಯವನ್ನು ಪಡೆದರು.

ತಲಚೇರಿಯ ಬ್ರೆನೆನ್ಸ್ ಕಾಲೇಜಿನ ಆಟಗಾರರು ಮಡಿಕೇರಿಗೆ ಬಂದು ಇಲ್ಲಿಯ ಹೈಸ್ಕೂಲು ಟೀಮಿನೊಡನೆ ಹಾಕಿ ಆಟದಲ್ಲಿ ಸೋತರು. ಬಾಸ್ಕೆಟ್ ಬಾಲ್ ಮತ್ತು ಕ್ರಿಕೆಟ್ ಆಟಗಳಲ್ಲಿ ಜಯಶೀಲರಾದರು.

ಗಾಂಧಿ ಜಯಂತಿಯನ್ನು ಮಡಿಕೇರಿಯಲ್ಲಿ ತಾರೀಕು 2-10-44ರಲ್ಲಿ ಆಚರಿಸಲಾಗುವದೆಂದು ತಿಳಿಯಬಂದಿದೆ.

ಮಡಿಕೇರಿ ವೇದಾಂತ ಮಂದಿರದವರು ನವರಾತ್ರಿ ಉತ್ಸವವನ್ನು ತಾ. 18ರಿಂದ 27ರ ವರೆಗೆ ವಿಜೃಂಭಣೆಯಿಂದ ನೆರವೇರಿಸಿದರು. ಅನೇಕ ಮಹನೀಯರ ಭಾಷಣ, ಹರಿಕಥೆ, ವಾಚನಗಳು ಏರ್ಪಡಿಸಲ್ಪಟ್ಟಿದ್ದವು.

ಸಾರ್ವಜನಿಕ ಸಭೆಗಳು.

ಇತರ ಎಲ್ಲಾ ಸಾಮಾನುಗಳ ಕ್ರಯವು ಏರಿ, ಜೀವನದ ಖರ್ಚು ಹೆಚ್ಚಾಗಿರುವ ಕಾರಣ ಭತ್ತದ ಕ್ರಯವನ್ನು ಕಮ್ಮಿಪಕ್ಷ ಗಾಡಿಗೆ ರೂ. 150 ಕ್ಕಾದರೂ ಏರಿಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುವಂತೆ ಈ ತಾ. 22 ರಲ್ಲಿ ಮಡಿಕೇರಿಯಲ್ಲಿ ಶ್ರೀ ಕೊಕ್ಕಲೆರ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ತೀರ್ಮಾನಿಸಿ, ಈ ಸಂಬಂಧ ಚೀಫ್ ಕಮಿಷನರವರಲ್ಲಿಗೆ ಡೆಪ್ಯುಟೇಶನ್ ಹೋಗಲು ಶ್ರೀ ಕೊಂಗೆಟ್ಟಿರ ಅಪ್ಪಯ್ಯನವರನ್ನು ಪ್ರತಿನಿಧಿಯಾಗಿ ಆರಿಸಲಾಯಿತು.

ಇದೇ ರೀತಿ ಈ ತಾ. 28 ರಲ್ಲಿ ಕಾರ್ಗುಂದದಲ್ಲಿ ಶ್ರೀ ಪಟ್ಟಮಾಡ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಪಬ್ಲಿಕ್ ವಿಂಟೆಂಗಿನಲ್ಲೂ ತೀರ್ಮಾನ ಮಾಡಿ, ಡೆಪ್ಯುಟೇಶನ್ ಹೋಗಲು ಶ್ರೀ ಕುಟ್ಟೇಟಿರ ತಿಮ್ಮಯ್ಯನವರನ್ನು ಆರಿಸಲಾಯಿತು.

ಸಂಧಾನ ವಿಫಲವಾಯಿತೇ

ಭಾರತದ ಸ್ವಾತಂತ್ರ್ಯ ಸಾಧನೆಗಾಗಿ ಮಿ. ಜಿನ್ನಾರವರು ಐಕಮತ್ಯದಿಂದ ಸಹಕರಿಸುವ್ದಾದರೆ ಮುಸ್ಲಿಮರಿಗೆ ಆತ್ಮ ನಿರ್ಣಯ ಹಕ್ಕನ್ನು ಕೊಡಲಾಗುವುದು ಎಂದು ಗಾಂಧೀಜಿಯವರು ಮಿ. ಜಿನ್ನಾರಿಗೆ ತಮ್ಮ ಮಾತುಕತೆಯ ಕಾಲದಲ್ಲಿ ತಿಳಿಸಿದರೆಂದುಗೊತ್ತಾಗಿದೆ.

ಮಧ್ಯ ಕಾಲದ ಒಪ್ಪಂದ ಮತ್ತು ವ್ಯವಸ್ಥೆ ವಿಚಾರದಲ್ಲಿ ಮಿ. ಜಿನ್ನಾರವರು ತಮಗೆ ಬೇಕಾದ ಎಲ್ಲಾ ಅಂಶಗಳನ್ನೂ ಗಾಂಧೀಜಿಯಿಂದ ಪಡೆದುಕೊಂಡರೆಂದೂ, ಆಜಾದೆ ಸರ್ಕಾರದ ಮೇಲೆ ಒತ್ತಾಯ ಮಾಡುವ ವಿಷಯದಲ್ಲಿ ಅಷ್ಟು ಹೆಜ್ಜಾಗಿ ಸಹಕರಿಸುವ ಮನೋಭಾವವು ಮುಳ್ಳವರಾಗಿಲ್ಲವೆಂದೂ ಹೇಳಲಾಗಿದೆ. ಸರ್ಕಾರದವರು ಮಧ್ಯಕಾಲದ ವ್ಯವಸ್ಥೆ ವಿಚಾರವಾಗಿ ಎಷ್ಟರಮಟ್ಟಿಗೆ ಅವಕಾಶ ಕೊಡುತ್ತಾರೋ ಅಷ್ಟೇ ಸಾಕೆಂಬುವುದೇ ಮಿ. ಜಿನ್ನಾರವರ ಅಭಿಪ್ರಾಯವಾಗಿದೆ

ವೈಸರಾಯರ ಎಗ್ಸಿಕ್ಯುಟಿವ್ ಕೌನ್ಸಿಲನ್ನು ಈಗಿರುವ ಸ್ವರೂಪದಲ್ಲಿ ಪಹಿಸಿಕೊಟ್ಟರೂ ಸಹ ಅದಕ್ಕೂ ಮಿ. ಜಿನ್ನಾರವರ ಒಪ್ಪಿಗೆ ಇದೆಯಂತೆ. ವೈಸರಾಯಿ ಕೌನ್ಸಿಲ್ ಸಚಿವರಾದ ಸರ್ ಸುಲ್ತಾನ್ ಅಹಮದ್ ಮತ್ತು ಸರ್ ಶಫಿ ರೋಜ್ ಖಾನ್ ನೂನ್ ಇವರುಗಳು ಬೊಂಬಾಯಿ ಮಾತುಕತೆ ಮಧ್ಯಕಾಲದಲ್ಲಿ ಬಂದು ಮಿ. ಜಿನ್ನಾರೊಡನೆ ಮಾತಾಡಿದ ವಿಷಯವು ಗಮನಿಸತಕ್ಕದ್ದು.

ಮಾತುಕತೆ ವಿಫಲಯಿಯಾಗದೆ ಸಂಧಾನವು ವ್ಯರ್ಥವಾಗುವ ನಿರೀಕ್ಷೆಯು ಇಲ್ಲಿಯ ರಾಜಕೀಯ ವಲಯದಲ್ಲಿ ವಿಷಾದವನ್ನೂ ನಿರಾಶೆಯನ್ನೂ ಉಂಟುಮಾಡಿದೆ. ಸಂಧಾನವು ವಿಫಲವಾಯಿತೆಂದು ಬ್ರಿಟಿಷ್ ವಲಯದಲ್ಲಿ ಮಾತ್ರ ಸಂತೋಷವಾಗಿದೆಯೆಂದು ಅಭಿಪ್ರಾಯವಿದೆ.

ಗಾಂಧಿ-ಜಿನ್ನಾ ಮಾತು ಕತೆ ಫಲಕಾರಿಯಾಗುವ ಸಂಭವವಿಲ್ಲವೆಂದು ಶ್ರೀ ಸಿ. ರಾಜಗೋಪಾಲಾಚಾರ್ಯರಿಗೆ ಖಚಿತವಾಗಿ ತಿಳಿದುಬಂದಿದೆಯೆಂದು ಗೊತ್ತಾಗಿದೆ. ಈ ವಿಚಾರವನ್ನು ರಾಜಾಜಿಯವರು ತಮ್ಮ ಆಪ್ತ ಮಿತ್ರರೊಬ್ಬರಿಗೆ ತಿಳಿಸಿದರು.

ಗಾಂಧಿ-ಜಿನ್ನಾ ಮಾತುಕತೆ ಫಲಕಾರಿ ಆದರೆ ಅದು ದೊಡ್ಡ ಆಶ್ಚರ್ಯವೆಂದೂ ರಾಜಾಜಿಯವರು ಹೇಳಿದರೆಂದು ತಿಳಿದುಬಂದಿದೆ.

ಸಂಧಾನದಲ್ಲಿ ಗಾಂಧೀಜಿಯವರು ಬಹುಮಟ್ಟಿಗೆ ಬಹಳ ಉದಾರಭಾವದಿಂದ ನಡೆದುಕೊಂಡರು. ಮಿ. ಜಿನ್ನಾರವರು ಬಹು ಬಿಗಿಯಾಗಿಯೂ, ಹಟಸಾಧನೆ ಭಾವನೆಯಿಂದಲೂ ವರ್ತಿಸಿ

ರಣಭೇರಿ.

ಯೂರೋಪು ಯುದ್ಧದ ಕಡೇ
ಂಕವು ಯೂರೋಪಿನಲ್ಲಿ
ಡೆಯುತ್ತಿದೆ. ಮಿತ್ರರು
ರ್ಮನ್ನಿಯೊಳಗೆ ನುಗ್ಗತೊಡಗಿದ್ದಾ
ಪವಿತ್ರವೆಂದು ಜರ್ಮನರು ಹೇ
ವ ಜರ್ಮನಿಯೊಳನುಗ್ಗಿ ನಾಝಿ
ಕ್ಷನನ್ನು ನಾಶಮಾಡಲು ಮಿತ್ರರು
ಖಂಡ ಪ್ರಯತ್ನಕ್ಕೆ ತೊಡಗಿದ್ದಾರೆ.
ಗತ್ತನ್ನೇ ವಶಪಡಿಸಿಕೊಳ್ಳಲು ಹೊ
ಬೆ ಜರ್ಮನಿಯೊಳಗೇ ಬಂದು ಶತ್ರು
ಳು ನುಗ್ಗುವ ಪರಿಸ್ಥಿತಿ ಇಂದು ಬಂ
ು ಹೋಗಿದೆ. ಇಂಥಾ ಸಂದಿಗ್ಧಸ
ಯದಲ್ಲಿ, ಜರ್ಮನಿಯೇ ಶತ್ರುಗಳ
ಶಕ್ಕೆ ಇಂಚು ಇಂಚಿನಂತೆ ಸೇರುತ್ತಿ
ರೂ ಹಿಟ್ಲರನು ಮೌನದಿಂದಿರಲು
ಕಾರಣವೇನೆಂದು ಕೆಲವರು ಕೇಳುತ್ತಿ
ದ್ದಾರೆ. ಆತನು ಜರ್ಮನಿಯಿಂದ ಓ
ಹೋಗುವ ಹಂಚಿಕೆಯಲ್ಲಿದ್ದಾನೆಂ
ು ಕೆಲವರು ಹೇಳುತ್ತಾರೆ. ಹಿಟ್ಲರ
ಈ ವರೆಗಿನ ಕಾರ್ಯ, ನಡತೆಗಳ
ನ್ನು ನೋಡಿದರೆ ಆತನು ಈ ರೀತಿ ಶ
ಕ್ಷಪ್ತಿಸಿಕೊಂಡು ಓಡಿಹೋದಾನೆಂಬು
ಕ್ಕೆ ಆಧಾರಗಳು ದೊರೆಯುವದಿಲ್ಲ.
ೀಗೂ ಜರ್ಮನಿಯ ಪ್ರಸಿದ್ಧ ನಾಯ
ರೆಲ್ಲರೂ ಜರ್ಮನಿಯ ಹೊರಗಿನ
ಕ್ಯಾಂಪುಗಳಲ್ಲಿ ಸಾಕಷ್ಟು ಹಣ ಸಂ
ಪಿಸಿಟ್ಟುಕೊಂಡಿರುವರೆಂದು ತಿಳಿಯು
ಂದಿದೆ. ಜರ್ಮನಿಗೆ ಗಂಡಾಂತರ
ಪ್ರಾಪ್ತವಾದಾಗ ಇವರು ತಲೆತಪ್ಪಿಸಿಕೊಂಡು
ಹೋಗಿಬಿಡುವುದೇ ಸಾಧಾರಣದ
ಊಹೆ. ಜರ್ಮನಿಯ ಕಡೇ ಯುದ್ಧ
ದ್ದು. ಆದ್ದರಿಂದ ತಮ್ಮ ಸರ್ವಸ್ವವ
ನ್ನೂ ಅವರು ಉಪಯೋಗಿಸಿ ಹೋ
ರಾಡುವುದು ಸ್ವಾಭಾವಿಕ. ಅವರು
ಹಲೆಂಡ್ ಗಡಿಯಲ್ಲಿ ಮಿತ್ರರಾಷ್ಟ್ರಗಳ
ನ್ನು ಬಹು ತೀಪ್ರವಾಗಿ ಎದುರಿಸಿ ಮಿ
ಕರನ್ನು ಕೆಲವು ಹೆಜ್ಜೆ ಹಿಮ್ಮೆಟ್ಟಿಸಿದ್ದ
ದೆ ಮಿತ್ರರಿಗೆ ಸಾಕಷ್ಟು ನಷ್ಟವನ್ನು
ಾಡಿರುವರು. ಹೇಗೂ ಮಿತ್ರರು
ಹು ಶ್ರಮವಹಿಸಿ ದಿಟ್ಟತನದಿಂದ ಕಾ
ಡಿದುದರಿಂದ ಮಿತ್ರರ ಕೈ ಮೇಲಾ
ಯಥಾರೀತಿ ಇವರ ಮುನ್ನಡೆಯು
ಗತೊಡಗಿದೆ. ಜರ್ಮನರ ಶಕ್ತಿ ಪೂ
ರ್ಣ ಕುಗ್ಗಿದೆಯೆಂದು ಯಾವ ರೀತಿ
ಂದಲೂ ಹೇಳಲಿಕ್ಕೆ ಬರುವದಿಲ್ಲ.

ಸಹಿಸಲಾರದಷ್ಟು ನಷ್ಟವಾಗಿದ್ದರೂ ಅವರ ಪ್ರತಿಭಟನಾ ಶಕ್ತಿ ಹೇಳಿಕೊಳ್ಳುವಷ್ಟು ಇದೆ. ಜರ್ಮನಿಯನ್ನು ಬಗ್ಗುಬಡಿಯಬೇಕಾದರೆ ಅಖಂಡವಾದ ಸೀಜ್‌ಫ್ರೈಡ್ ಲೈನನ್ನು ನಾಶಮಾಡಬೇಕು. ಈ ಲೈನು ಒಂದು ಕೋಟೆಯಲ್ಲ; ಅದು ಸಹಸ್ರಾರು ಕೋಟೆಗಳ ಸಮ್ಮಿಲನ. ಒಂದು ಕೋಟೆಯನ್ನು ಮುರಿದರೆ ಇನ್ನೊಂದು ಕೋಟೆಯು ಎದುರಿಸಲು ಸಿದ್ಧ. ಸೀಜ್‌ಫ್ರೈಡ್ ಲೈನಿನ ನಾಶವಾದರೆ ಇಡೀ ಜರ್ಮನಿ ನಾಶವಾದಂತೆ. ಜರ್ಮನರ ಪ್ರತಿಭಟನೆ ಜೋರಾದಂತೆ ಮಿತ್ರರ ಪ್ರಹಾರಗಳೂ ಬಲವಾಗತೊಡಗಿವೆ. ಜರ್ಮನರು ಮುಂದಿನ ದಿನಗಳಲ್ಲಿ ಬಹು ಶೌರ್ಯದಿಂದ ಪ್ರತಿಭಟಿಸುವ ಚಿಹ್ನೆಗಳು ಕಂಡುಬರುತ್ತಿವೆ.

ಜರ್ಮನಿಯ ಜನತೆಯು ಇಂದು ಯಾವ ರೀತಿಯ ಅಭಿಪ್ರಾಯಪಡುತ್ತಿರಬಹುದು? ಯಾವ ರೀತಿಯ-ಯೋಚನೆಯಲ್ಲಿರಬಹುದೆಂದು ಆಲೋಚಿಸಿದರೆ ಮೇಲೆ ಮೇಲೆ ಬರುತ್ತಿರುವ ಅಪಜಯಗಳಿಂದ ದಿಕ್ಕೆಟ್ಟು ವರ್ತಿಸುತ್ತಿರಬಹುದೇ? ಕಷ್ಟಕಾಲದಲ್ಲಿ ದೇಶಹಿತವನ್ನು ಬಿಟ್ಟು ಜೀವರಕ್ಷಣೆಮಾಡುವ ಹೇಡಿಗಳಾದ ಜನರಲ್ಲ ಜರ್ಮನರು. ಅವರಿಗೆ ಸ್ವಾತಂತ್ರ್ಯದ ಬೆಲೆ ಗೊತ್ತಿದೆ. ಅದಕ್ಕಾಗಿ ಪ್ರಾಣವನ್ನು ತೆರಲೂ ಅವರು ಹಿಂಜರಿಯಲಾರರು. ಪರದಾಸ್ಯದಲ್ಲಿರುವ ಜನರಿಗೆ ಸ್ವಾತಂತ್ರ್ಯದ ಹಿರಿಮೆ ತಿಳಿಯುವದಿಲ್ಲ. ಆದ ಕಾರಣ ಕಷ್ಟ ಬಂದಾಗ ಅದನ್ನು ಬಲಿಕೊಡಲು ಹೇಸುವದಿಲ್ಲ. ಆದರೆ ಸಹಸ್ರಾರು ವರ್ಷಗಳಿಂದ ಸ್ವಾತಂತ್ರ್ಯವೇದಿಕೆಯಲ್ಲಿಯೇ ಜೀವಿಸಿದ ಮತ್ತು ಜೀವಿಸುತ್ತಿರುವವರು ತಮ್ಮ ಕೈಯಲ್ಲಿ ಸಾಧ್ಯವಿರುವ ತ್ಯಾಗಮಾಡದೆ ದೇಶವನ್ನು ಮತ್ತೊಬ್ಬರಿಗೆ ಬಿಡಲಾರರು. ಈ ದೃಷ್ಟಿಯಿಂದು ಹೇಳುವದಾದರೆ ಜರ್ಮನರು ಕಡೇ ಯುದ್ಧಕ್ಕೆ ತಯಾರಾಗುತ್ತಿರಲೇಬೇಕು. ಯಾವದೇ ಜನಾಂಗದಲ್ಲಿ ಇರುಪವರಿಲ್ಲರೂ ಆದರ್ಶವ್ಯಕ್ತಿಗಳೇ ಇರಲಾರರು. ಯುದ್ಧ ಸಾಕಷ್ಟ. ದೇಶವು ನಾಶವಾದರೂ ಆಗಲಿ; ನಮ್ಮ ಜೀವ ಉಳಿದು ಮುಂದಿನ ಜೀವನ ನಡೆಯುವ ಸೂರ್ಗವಾದರೆ ಸಾಕೆಂಬವರೂ ಇರಬಹುದು. ಆದರೆ ಒಂದು ರಾಷ್ಟ್ರವು ಜಗತ್ತಿನಲ್ಲಿ ಅದ್ವಿತೀಯವಾಗಿ ಮೆರೆಯಬೇಕಾದರೆ, ತನ್ನ ಜಾಣ್ಮೆಯಿಂದ, ಕಲಾಕೌಶಲದಿಂದ ಜಗತ್ತನ್ನು ಬೆರಗುಗೊಳಿಸಬೇಕಾದರೆ ಆ ಜನಾಂಗದ ಬಹುಮಂದಿಯರು ಚೈತನ್ಯಯುಕ್ತರಾಗಿರಬೇಕು. ನಾಡಿನ ಏಳಿಗೆಗಾಗಿ ಶ್ರಮಿಸುವವರಿರಬೇಕು. ಆದ್ದರಿಂದ ಜರ್ಮನಿಯು ಯುದ್ಧದ ವಿಶಮವಾತಾವರಣದಿಂದ ಬೇಸರಗೊಂಡಿರಬಹುದಾದರೂ ಕಂಗೆಟ್ಟು ನಿರಾಶೆಯಿಂದಿರಲಿಕ್ಕಿಲ್ಲ. ಪೂರ್ವ

ದು ವಿಫಲವಾಗಲು ಕಾರಣವಾಯಿ
ಲೀಗ್ ನಿರ್ಣಯಕ್ಕಿಂತಲೂ ಅಧಿ
ರಾಗಿ ಮಿ.ಜಿನ್ನಾರವರುತಮ್ಮ ಬೇಡಿ
ಗಳನ್ನು ಮೂತ್ಸುಕತೆಯಲ್ಲಿಮುಂದಿಟ್ಟು
ರಾದಿಸಿದ್ದಾರೆ ಎಂದುಹೇಳಲಾಗಿದೆ.
ಎರಡು ವಾರಗಳಿಂದ ನಡೆದ ಮೂ
ಕತೆಯೆಲ್ಲವೂ ವ್ಯರ್ಥವಾಯಿತು.
ಾವ ವಿಧವಾದ ಒಪ್ಪಂದಕ್ಕೂ ಬರ
ಲ್ಲವೆಂದು ಹೇಳಲಾಗಿದೆ. ಉಭಯತ
ೂ ಇದುವರೆಗೆ 26 ಗಂಟೆಗಳ ಕಾಲ
ಾತುಕತೆ ನಡೆದಿದೆ.

ಭಾಗದಿಂದ ರಷ್ಯನರು ಮುಂದೊತ್ತಿಬರುತಿದ್ದಾರೆ. ಅವರನ್ನೂ ಈ ಕಳೆದ ವಾರದಿಂದ ನಿರಾತಂಕವಾಗಿ ಸಾಗಗೊಡದೆ ಅವರ ದಾರಿಗೂ ಕಡೆ ಹಾಕಿದ್ದಾರೆ ಜರ್ಮನರು.

ಈ ಮಧ್ಯೆ ಬ್ರಿಟಿಷ್ ಪ್ರಧಾನ ಚರ್ಚಿಲ್ಲರೂ, ಅಮೇರಿಕಾದ ಅಧ್ಯಕ್ಷ ರೂಸ್‌ವೆಲ್ಟರೂ ಕ್ವಿಬೆಕಿನಲ್ಲಿ ಮಾತುಕತೆ ನಡೆಸಿದರು. ರಷ್ಯಾದ ಸ್ಟಾಲಿನನಿಗೂ ಆಮಂತ್ರಣವಿತ್ತು. ಸ್ಟಾಲಿನರು ಹೋಗದಿದ್ದರೂ ಅಂತೋಣಿಈಡನ್ ಮೊದಲಾದವರು ಈ ಚರ್ಚೆಯಲ್ಲಿದ್ದುದನ್ನು ಯೋಚಿಸಿದರೆ ಯೂರೋಪಿನ ಭವಿಷ್ಯದ ವಿಚಾರ ಇಲ್ಲಿ ಚರ್ಚೆ ಆಗಿರಬಹುದೆಂದು ಊಹಿಸಬಹುದು. ಅಲ್ಲದೆ ಜಪಾನಿನ ಮೇಲಿನ ಧಾಳಿಯ ಪರ್ಯಾಲೋಚನೆಯೂ ಆಗಿರಬಹುದು. ಯೂರೋಪಿನ ಭವಿಷ್ಯವು ಈ ಎರಡು ಮುತ್ಸದ್ದಿಗಳಿಂದ ರೂಪಿಸಲ್ಪಡುವದು ಸಾಧ್ಯವೇ ಎಂದು ಯೋಚಿಸಿದರೆ ಇವರಿಬ್ಬರಿಗಿಂಥಲೂ ಯೂರೋಪಿನ ಮೇಲೆ ಯುದ್ಧಾನಂತರದಲ್ಲಿ ರಷ್ಯಾದ ವರ್ಚಸ್ಸೇ ಹೆಚ್ಚು ಬೀಳುವಂತೆ ಕಂಡುಬರುತ್ತದೆ. 'ರಷ್ಯಾದ ಸ್ಟಾಲಿನನ ಯುದ್ಧೋತ್ತರ ಯೋಜನೆಯೇನೆಂದು ಯಾರಿಗೂ ತಿಳಿದುಬಂದಿರದಿದ್ದರೂ ಯೂರೋಪಿನ ಭವಿಷ್ಯದ ಬಗ್ಗೆ ಕ್ವಿಬೆಕಿಗಿಂತಲೂ ಕ್ರಿಮೆಲಿ (ರಷ್ಯಾ)ನೇ ಹೆಚ್ಚು ಪರಿಣಾಮಕಾರಿಯಾಗುವದರಲ್ಲಿ ಸಂಶಯವಿಲ್ಲ.

ಶಾಂತಸಾಗರದಲ್ಲಿ ಮಿತ್ರರು ಬಲವಾಗಿ ತಳವೂರತೊಡಗಿದ್ದಾರೆ. ಫಿಲಿಫೈನ್ ದ್ವೀಪಗಳ ಮೇಲೆ ಅವರ ಧಾಳಿಯು ಬಲವಾಗಿ ಆಗಲಿದೆ. ಜಪಾನರು ತಮ್ಮ ನೌಕಾಪಡೆಗಳನ್ನು ಈ ಕಡೆಯಿಂದ ಹಿಂತೆಗೆಯುವ ಯೋಜನೆಯಲ್ಲಿರುವರಂತೆ. ಜಪಾನು ಮುಂದಿನ ಭಯಂಕರ ಯುದ್ಧಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಮುಂದಿನ ಘಟನೆಗಳನ್ನು ಅವಲೋಕಿಸುತ್ತಿರುವಾ.

ನಿಮ್ಮ ದಿನನಿತ್ಯದ ಉಪಯೋಗಕ್ಕೆ ಉತ್ತಮೋತ್ತಮ ವಾದ

ಪರಿಮಳವುಳ್ಳ
—ಶಾರದಾ—
ಕಾಫಿ ಪುಡಿ

ಇದನ್ನೇ ಉಪಯೋಗಿಸಿರಿ.

ಕಾಫಿ ಪುಡಿಗಳಲ್ಲಿ ತಿಲಕಪ್ರಾಯವಾದ್ದು.

SHRI SHARADA COFFEE HOME,
2) McDOWELLS BUILDINGS, *MERCARA*.

ನಂಬಿಕೆಗರ್ಹವಾದ ಸಂಖ್ಯೆಗಳು.

23ನೇ ತ್ರೈವಾರ್ಷಿಕ ಮೌಲ್ಯಗಣನೆ.

ಮೂರು ವರ್ಷಗಳ ಐನ್ ಲಾಭ **1,50,68,092.**

ವಿಮಾದಾರರ ಕ್ಲೇಮು ನಿಧಿ 54 ಲಕ್ಷ ಸೇರಿಸಿದೆ.

ಬೋನಸುಗಳು ಹೋಲ್ ಲೈಫ್ 1000ಕ್ಕೆ ವರ್ಷಕ್ಕೆ 12½%

ಎಂಡೋಮೆಂಟ್ .... 1000ಕ್ಕೆ ವರ್ಷಕ್ಕೆ 10½%

'ಓರಿಯಂಟಲ್'

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ

ಸ್ಥಾಪನೆ ಭಾರತದಲ್ಲಿ 1874] [ಮುಂಬಯಿ ಖಜೇರಿ–ಬೊಂಬಾಯಿ.

ಶಾಖೆ–'ಓರಿಯಂಟಲ್ ಬಿಲ್ಡಿಂಗ್ಸ್' ಸೌತ್ ಪೇರೇಡ್, ಬೆಂಗಳೂರು.

ಇನ್ಸ್‌ಪೆಕ್ಟರರ ಆಫೀಸು—ಕೆ. ಸದಾಶಿವ ರೋಡು, ಮಂಗಳೂರು.

ಈ ದಿನಗಳಲ್ಲಿ ಜೀವವಿಮೆಯು ಜಾತಿ, ಮತ್ತು ಉದ್ಯೋಗಗಳ ಬೇಧವಿಲ್ಲದೆ ಎಲ್ಲರಿಗೂ ಅವಶ್ಯವೆಂದು ನಾವೆಲ್ಲರೂ ಒಪ್ಪುತ್ತೇವೆ.

ವಿವರಗಳಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್, ಲಿ.

ದಕ್ಷಿಣ ಹಿಂದೂಸ್ಥಾನಕ್ಕೆ ಮುಖ್ಯ ಏಜಂಟರು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

2) ಪುತ್ತೂರು, ಕಲ್ಲಿಕೋಟೆ.

ದಕ್ಷಿಣ ಹಿಂದೂಸ್ಥಾನದಲ್ಲೆಲ್ಲಾ ಶಾಖೆಗಳೂ, ಏಜೆನ್ಸಿಗಳೂ ಇವೆ.

ಧಾತು ವೃದ್ಧಿ ರಸಾಯನ (JANDU)

"ರ್ಯಾಕ್ಟೋ—ಫಾಸ್ಫೋ—ಮೂಲ್ಟ್"

ಎಂಬು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯೂಗಿರುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟ್ರಿಕ್ ಫಾಸ್ಫೋವೊಲ್ಟ್, ಹೆಮೋಗ್ಲೋಬಿನ್, ಸೋದಿಗ್ಲಿಸರೊ ಫಾಸ್ ಫೇಟ್ ಪೆಪ್ಟನ್, ಸಾಲ್, ಮೂಲ್ಟ್ ಎಕ್ಸ್‌ಟ್ರಾಕ್ಟ್, ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಶಾಪುಗಳಲ್ಲಿದೆ.

ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,

4) ಗೋಖಲೆ ರೋಡ್, ಬೋಂಬೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

41) ಸ್ಥಾಪನೆ:—೧೮೯೭.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	೯೭,೩೭,೦೦೦ ರೂಪಿದೆ
	ಚಾಲ್ತಿಯಿರುವ ವಿಮೆ	೧೬,೪೯,೮೮,೦೦೦ ,,
	ಆಸ್ತಿ	೬,೩೦,೪೬,೦೦೦ ,,
ಕಂಪೆನಿಯ ಅವಧಿಯಲ್ಲಿ ಕೊಟ್ಟ ಕ್ಲೈಮುಗಳು		೮,೩೮,೦೦,೦೦೦ ,,

ಆಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,	ಅರ್ಜಿಗಳನ್ನು	ಎಂಪೈರ್ ಆಫ್ ಇಂಡಿಯಾ
ಚಿಂಪೇಗೌಡ ರಸ್ತೆ, ಬೆಂಗಳೂರು.	ಸ್ವಾಗತಿಸಿದೆ.	ಲೈಫ್ ಬಿಲ್ಡಿಂಗ್ ಬೋಂಬೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ)

ವಸೂಲಾದ ಶೇರ್ ಮೊಬಲಗು ರೂ. 95,060, ಜನರ ಬಾಬ ಠೇವಣಾತಿ 2,24,750 ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

"ಟ್ರಾಪಿಕಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮುಲ್ ಖಾನ್, ಡಾ. ಯಂ. ಎ. ಅನ್ಸಾರಿ, ಸುಭಾಶ ಚಂದ್ರ ಬೋಸ್

ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,

ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವನಿನೆಯೇ ನಿಮ್ಮನ್ನು ರಕ್ಷಿಸುವುದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ.

ಮುಖ್ಯ ಖಚೇರಿ: **ಹೊಸ ದಿಲ್ಲಿ**] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, **ಯಂ. ರಂಗನಾಥಶೆಟ್ಟಿ,**

36) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

ಕಸ್ತೂರ್ ಬಾ ನಿಧಿ.

ಒಬ್ಬಂತರು	301
ವೀರಾಜಪೇಟೆ ಹೈಸ್ಕೂಲು	141
ಶ್ರೀ ಮರಿಯಪಂಡ ಕುಶಾಲಪ್ಪನವರು	110
ಕಾಳಪಂಡ ಎಂ. ತಿಮ್ಮಯ್ಯನವರು	100
ಚಿಕ್ಕೇರ ಬೋಪಯ್ಯನವರು	100
ಕೃಷ್ಣನವರು	100
ಲೇಟ್ ನೆರವಂಡ ಅಪ್ಪಚ್ಚನವರು	100
ಪುತ್ತಂಪರೆ ಮೈದುನವರು	100
ಗೋಪಾಲದಾಸರ ಹರಿಕಥೆ ಮತ್ತು ಚಿಕ್ಕೇರ ಅಪ್ಪಯ್ಯನವರ ಸಂಗೀತ	96¾
ಕೆ. ಎಲ್. ಭಂಡಾರಿಯವರು	75
ಡಾ. ಆಶ್ರಣ್ಣನವರು	50
ಶ್ರೀ ಬೊಳದಂಡ ಕಾಳಪ್ಪನವರು	50
ಪಾರ್ವಂಗಡ ಅಚ್ಚಯನವರು	50
ಕೇಳಪಂಡ ಅಚ್ಚಯ್ಯನವರು	50
ಮುಕ್ಕಾಟಿರ ಕರುಂಬಯ್ಯನವರು	50
ಡಾ. ಪಾಂಡಂಡ ಸೋಮಪ್ಪನವರು	50
ಡಾ. ನಂಜುಂಡೇಶ್ವರನವರು	50
ಶ್ರೀ ಎಸ್. ಶ್ರೀನಿವಾಸಯ್ಯನವರು	50
ಕೋದಾಂಡ ಎ. ನಂಜಪ್ಪನವರು	50
ಜಿ. ಪಿ. ವೈಟ್‌ರವರು	50
ಮಡಿಕೇರಿ ಹೈಸ್ಕೂಲ್	46
ಟಿ. ಆರ್. ರಾಮಚಂದ್ರಾಚಾರ್‌ರವರು	40
ಪುಟ್ಟಚಂಡ ಅಚ್ಚಯ್ಯ ಆಂಡ್ ಬ್ರದರ್	35
ಜಮ್ಮಾಡ ಅಚ್ಚಪ್ಪನವರು	35
ಕೆ. ವಿ. ಗಿರಿಯವರು	35
ಕುಟ್ಟೇಟಿರ ಎಂ. ತಿಮ್ಮಯ್ಯನವರು	30
ಶ್ರೀಮತಿ & ಶ್ರೀಯುತ ಕೋಡಿಮಣಿಯಂಡ ಬೆಳ್ಯಪ್ಪನವರು	30
ಶ್ರೀ ತೀತಿರ ನಂಜಪ್ಪನವರು	30
ಬಿ. ಜಿ. ಬೆಳ್ಯಪ್ಪನವರು	30
ಚೆಪ್ಪುಡಿರ ನಂಜಪ್ಪನವರು	30
ಪಾರ್ವಂಗಡ ಗಣಪತಿಯನವರು	28
ಪಿ. ಎ. ದಾಮೋದರ ನೊದಲಿಯಾರ್ರವರು	25
ಟಿ. ಕೆ. ರಾಮಚಂದ್ರಾಚಾರ್‌ರವರು	25
ಪಟ್ಟಡ ಬೊಳ್ಳನ್ನವರು	25
ಪಾಲೇಕಂಡ ಎಂ. ಪೊನ್ನಪ್ಪ & ಬ್ರದರ್ಸ್	25
ಕಾಕಮಾಡ ಅಪ್ಪಯ್ಯನವರು	25
ಕೋಳಿರ ಪಿ. ಕರುಂಬಯ್ಯನವರು	25
ಎಂ. ಸಿ. ಶಾಂತಮಲ್ಲಪ್ಪನವರು	25
ಬೊಳ್ಳಿರ ಎಂ. ಮುತ್ತಣ್ಣನವರು	25
ಎ. ಪಿ. ಸುಬ್ಬಯ್ಯನವರ ಹೆಣ್ಣುಮಕ್ಕಳು	25
ಎಚ್. ಶೇಷಪ್ಪ ಹೆಬ್ಬಾರ್‌ರವರು	25
ಮಂಗಳೂರು ಸ್ಟೋರ್ಸ್	25
ಕೆದಂಬಾಡಿ ಗಣಪತಿಯನವರು	25
ತೀತಿರ ಬೆಳ್ಯಪ್ಪನವರು	21
ಕೋದಾಂಡ ಎಂ. ದೇವಯ್ಯನವರು	20
ಕುರ್ಗ್ ಸ್ಟೋರ್ಸ್, ಮಡಿಕೇರಿ	20
ಕೊಂಗಂಡ ಡಿ. ಪೊನ್ನಪ್ಪನವರು	20
ಮಿಸೆಸ್ ಕೋದಾಂಡ ಬೆಳ್ಯಪ್ಪನವರು	20
ಶ್ರೀ ಮುಕ್ಕಾಟಿರ ಮೊದಪ್ಪನವರು	15
ಡಿ. ದಾಸಾರಿಯವರು	15
ಬಿ. ಪಿ. ಅಣ್ಣಪ್ಪನವರು	15
ಕೊಕ್ಕಲೆರ ನಂಜುಂಡನವರು	15
ಟಿ. ರಾಮಣ್ಣಾಚಾರ್‌ರವರು	15
ಪಿ. ಆರ್. ಟಿ. ಪೂಂಜನವರು	15
ಬಡ್ಡಿರ ಎ. ಅಪ್ಪಣ್ಣನವರು	15
ಉಪಾಧ್ಯಾಯರ ಸಹಕಾರ ಸ್ಟೋರ್ಸ್	15
ಶ್ರೀ ಕೂಡಕಂಡಿ ದೇವಯ್ಯನವರು	15
ಎ. ಕೆ. ಬಾದಶಾ	15
ಬಿದ್ದಾಟಂಡ ಐಯ್ಯಣ್ಣನವರು	11
ವೀರಾಜಪೇಟೆ ಟೌನ್ ಬ್ಯಾಂಕ್	10
ತೀತಿರ ಸುಬ್ಬಯ್ಯನವರು	10
,, ಟಿ. ಮುತ್ತಮ್ಮನವರು	10
ಗಿಡ್ಡಾಸೇಟ್ ಸನ್ಸ್ ಆಂಡ್ ಕಂಪೆನಿ	10
ಪಾಂಡಂಡ ತಿಮ್ಮಯ್ಯನವರು	10
ಶ್ರೀ ಕರ್ತಮಾಡ ಚಂಗಪ್ಪನವರು	10
ಕುಟ್ಟೇಟಿರ ಎಂ. ಮುತ್ತಣ್ಣನವರು	10
,, ಸುಬ್ಬಯ್ಯನವರು	10
ಬಡ್ಡಿರ ಎನ್. ಸುಬ್ಬಯ್ಯನವರು	10
ಡಿ. ರಾಮಯ್ಯನವರು	10
ಬಿ. ತ್ಯಾಂಪಣ್ಣ ತೆಟ್ಟಿಯವರು	10
ಜಿ. ಸಿ. ಪೂವಪ್ಪನವರು	10
ಕೆ. ಟಿ. ಗಣಪತಿಯವರು	10
ಕರ್ತಮಾಡ ಬೋಪಯ್ಯನವರು	10
ಕುಟ್ಟಂಡ ತಿಮ್ಮಯ್ಯ & ಬ್ರದರ್	10
ಎ. ಎಸ್. ತಮ್ಮಯ್ಯನವರು	10
ಮಿಸ್ ಪಟ್ಟಮಾಡ ಕಿಟ್ಟಿ ಪೊನ್ನಪ್ಪನವರು	10
ಶ್ರೀ ಹಸನ ಬ್ಯಾರಿಯವರು	10
ಕಾಂತೂರು ಸಂಘ	10
ಶ್ರೀ ಕುಟ್ಟಂಡ ಗಣಪತಿ & ಸನ್ಸ	10
ಪಿ. ವಿ. ನಾರಾಯಣರವರು	10
ಪಿ. ಎಂ. ಗಂಗಮ್ಮನವರು	10
ಟಿ. ಬಿ. ಪುಟ್ಟಸ್ವಾಮಿಯವರು	10
ಕುಂಞಕಳಂದ ಬ್ಯಾರಿಯವರು	10
ಕೆ. ಎಸ್. ಕೃಷ್ಣಐಯ್ಯರವರು	10
ಎಂ. ಬಾಲು & ಬ್ರದರ್ಸ್	10
ಬಿದ್ದಂಡೆ ಬೆಳ್ಳಮ್ಮನವರು	10
ಎ. ಎನ್. ಶಿವನಂಜಪ್ಪನವರು	10
ಕರಿಯಂಡಜ ಸಂಘ	6

ರೂ. 5 ಕೊಟ್ಟವರು.

ಶ್ರೀ ಗಳಾದ ಕೆ. ಪೆಮ್ಮಯ್ಯ, ಬೈರೆಟ್ಟಿರ ಜೆಂಗಪ್ಪ, ಎ. ಡಿ ಅಪ್ಪಚ್ಚು ಮಿಸೆಸ್ ಮುದೇಟಿರ ಪೂದಪ್ಪ ಕೆ ಬಿ ಕರಿಯಪ್ಪ, ಕೆ ಎಂ ಐಯ್ಯಣ್ಣ, ಬಿದ್ದಾಟಂಡ ಸೀತಮ್ಮ, ಫ್ರೈಜರುಪೇಟೆ ಸಹಕಾರ ಕೂಟ, ಬಿ ಎನ್. ಕೃಷ್ಣಪ್ಪ, ಮಿಸೆಸ್ ಕೆ ಎನ್. ಭಾಗ್ಯಲಕ್ಷ್ಮಿ, ಜೇನುನೋಣ ಸಂಘ, ಭುಜಬಲಯ್ಯ ಎನ್. ಎಸ್. ಶಂಬಯ್ಯ, ಅಮ್ಮಚಂಡ ಪೊನ್ನಪ್ಪ, ಜೊಟ್ಟಿರ ಬಿ ಚಿಣ್ಣಪ್ಪ, ಬಡುವಂಡ ಕುಶಾಲಪ್ಪ, ದೇಚಮ್ಮ, ಹೆರುಬಾಯಿ ಉತ್ತಯ್ಯ, ತಣ್ಣಿಮಾನಿ ಸಂಘ, ಶ್ರೀಪತಿ ಆಚಾರ್, ಮುಕ್ಕಾಟಿರ ಪಿಮ್ಮು, ಎನ್. ಸುಬ್ರಾಯ, ಎ ಎಸ್. ಕೃಷ್ಣಭಟ, ಟಿ ಪದ್ಮನಾಭಾಚಾರಿ, ಮುಂಡುಮಾಡ ಐಯ್ಯಮ್ಮ, ಮಚ್ಚಮಾಡ ಕಾಳಪ್ಪ, ಮಿಸೆಸ್ ತೀತಿರ ಕಾಳಪ್ಪ ಇಟ್ಟಿರ ನಂಜಪ್ಪ, ಬಾಡಗ ಸಹಕಾರ ಸಂಘ ಕೋಡಂಬೂರು ಮುತ್ತಾರುಮುಡಿ ಸಂಘ, ಕೆ ಎ ಮಹ್ಮದ್ ಹುಸೇನ್, ಬಿ ಸಿ ಅಪ್ಪಚ್ಚು, ಗುಬ್ಬಿ ಬಸಪ್ಪ, ಡಾ ಕಡೇಮಾಡ ಕರುಂಬಯ್ಯ, ಎಂ ಎನ್. ಕಾಮತ್, ಮಿಸೆಸ್ ಬೊಮ್ಮಂಡ ಮುತ್ತಣ್ಣ ಬಾಳುಗೋಡು ಸಂಘ, ಶ್ರೀ ಕಾವೇರಿ ಆಶ್ರಮ ಬಿ ಕೆ ರಾಘುಕೃಷ್ಣ, ಮದ್ರೀರ ಮಂದಣ್ಣ, ಜಿ ವಿಶ್ವನಾಥರೈ, ಕೋಳೆರ ಚಿಟ್ಟಯ್ಯ ಪರಿವಾರದ ಪೊನ್ನಪ್ಪ ಕೋಡಿಮಣಿಯಂಡ ಕಾವೇರಿ ಚಿಟ್ಟಮಾನಿ ಸಂಘ ಚಿಟ್ಟಮಾನಿ ದವಸಭಂಡಾರ ಬಿ ಆರ್. ಪುಂಜಪ್ಪ, ರೈ ಕೆ ಡಿ ಸೋಮಯ್ಯ ಅಬ್ದುಲ್ ರಹಿಮಾನ್, ಕೆ. ಲಕ್ಷ್ಮಿನಾರಾಯಣ ಭಾಗಮಂಡಲ ಸಂಘ ಚೇರಂಗಾಲ ಸಂಘ ಕೋರಂಗಾಲ ಸಂಘ ಬಿ ಎ ತಮ್ಮಯ್ಯ ಬಿದ್ದಂಡ ಜಿ ಮುತ್ತಣ್ಣ ಅಜ್ಜಮಾಡ ಕೆ ಅಮ್ಮಿ ಬಿ ನಾರಾಯಣಶೆಟ್ಟಿ ಮೇಕೇರಿರ ಅಚ್ಚಪ್ಪ ಮಿಸೆಸ್ ಕೆ ಕೆ ಸೋಮಯ್ಯ ಮಿಸೆಸ್ ಚೇರಂದಂಡ ಜಂಗಪ್ಪ ಕೊಕ್ಕಲೆರ ತಿಮ್ಮಯ್ಯ ಪಟ್ಟಡ ಸೋಮಯ್ಯ ಪಳೆಯಂಡ ಕುಶಾಲಪ್ಪ ಕುಪ್ಪಂಡ ಎಂ ಸುಬ್ಬಯ್ಯ ಐ ಐ ಸೋಮಯ್ಯ—ಇವರುಗಳು.

1 ರೂ. ಕೊಟ್ಟವರು.

ಶ್ರೀ ಗಳಾದ ಮುಳ್ಳಂಡ ಜೋಯಪ್ಪ, ಕೊಂಗೆಟ್ಟಿರ ಕಾರ್ಯಪ್ಪ ಮುಳ್ಳಂಡ ಮುತ್ತಪ್ಪ, ಮುಳ್ಳಂಡ ಕಾವೇರ್ಯಪ್ಪ ಬಟ್ಟಿರ ಅಚ್ಚಯ್ಯ ಬಟ್ಟಿರ ಮೊದಪ್ಪ ಪುತ್ತೇರಿರ ಕುಶಾಲಪ್ಪ ಪುತ್ತೇರಿರ ಚಿಣ್ಣಪ್ಪ ಆಪಾಡಂಡ ಪೂಣಚ್ಚ ಬಿದ್ದ, ಕುಂಡೆನವುಲ ಬೊಳ್ಳಚೆಟ್ಟಿರ ಐಯ್ಯಮ್ಮ, ಪಳಂಗಂಡ ಕಾಳಪ್ಪ ಕೋರಂಡ ಉತ್ತಯ್ಯ ಚೋಳಪಂಡ ಗಣಪತಿ ಬಲ್ಲಾರಂಡ ಸುಬ್ಬಯ್ಯ ಚೆಟ್ಟಂಡ ಬೋಪಯ್ಯ ಕೊಂಗೆಟ್ಟಿರ ಬಿದ್ದಪ್ಪ ಮುಂಡೋಟಿರ ಮಂದಣ್ಣ, ಮುಕ್ಕಾಟಿರ ಬೊಳ್ಳಪ್ಪ ಕೆ ಬಿ ಅಪ್ಪಚ್ಚು ಮತ್ತು ಒಬ್ಬ ಹಿತೈಷಿ—ಇವರುಗಳು.

ಈ ವರೆಗೆ ಒಟ್ಟು ರೂ. 12,675—12—0 ಜಮೆಯಾಗಿದೆ. ಉಳಿದ ನುಹನೀಯರುಗಳ ಹೆಸರುಗಳನ್ನು ಮುಂದಿನ ವಾರ ಪ್ರಕಟಿಸಲಾಗುವುದು.